ಹೋಯಿತು. ಓಹ್ ಎಂದು ಉದ್ಗರಿಸಿದ ತಲೆಯನ್ನು ಕೊಡವಿಕೊಂಡು. ಸಮಯ ರಾತ್ರಿ ಏಳು ಮೂವತ್ತು. ಸುತ್ತ ಎಲ್ಲ ಕಡೆ ಕತ್ತಲು. ಒಂದೇ ಸೆಕೆಂಡಿನಲ್ಲಿ ಎಲ್ಲ ಕಡೆ ಆವರಿಸಿಕೊಂಡಿತು. ಅವರು ಕತ್ತಲೊಳಗೆ ಕರಗಿ ಹೋದರು. ಯಾವ ಸಂದಿಯಲ್ಲೂ ಹೊರಗಿನ ಬೆಳಕಿನ ರೂಹೂ ಸಹ ಕಾಣುತ್ತಿಲ್ಲ. ಬೆರಳುಗಳಿಗೆ ಪುಳಕ ಈಗ. ಯಾವುದೋ ಪಕ್ಷಿಯ ರೆಕ್ಕೆಯನ್ನು ಸವರಿದಂತಹ ಅನುಭವ. ಕೋಮಲ ಬೆರಳುಗಳು ಅವನ ತಲೆಯನ್ನು ಹಿಡಿದು ಎಳೆದುಕೊಂಡವು. ಅವನ ಮುಖಕ್ಕೆ ಉಬ್ಬಾಗಿರುವ ನುಣುಪು ಚರ್ಮದ ಸ್ಪರ್ಶ. ಎದುರಿಗೆ ವಿವಸ್ತ್ರ ದೇಹ. ಅದು ಇನ್ನಷ್ಟು ಅವನನ್ನು ತನ್ನ ದೇಹದತ್ತ ಎಳೆದುಕೊಂಡಿತು. ಅವನ ಕಿವಿಯನ್ನು ತನ್ನ ಉಬ್ಬಿರುವ ಹೊಟ್ಟೆಯ ಬಳಿ ಎಳೆದುಕೊಂಡಳು. ಒಳಗೆ ಜೀವದ ಚಲನೆ. ಮತ್ತಷ್ಟು ಪುಲಕಿತನಾದ. ನೀರಲ್ಲಿ ಏನೋ ತೇಲಿಕೊಂಡು ಹೋದಂತಹ ಸದ್ದು. ಅದು ಅವನ ನರಗಳೊಳಗೆ ಬೆರೆತು ಅವನ ಮೈಯಿ ಮತ್ತು ಮನಸ್ಸುಗಳನ್ನು ಆವರಿಸಿಕೊಂಡಿತು.

ಅವಳಿಗೂ ಪುಳಕ. ನಿತಂಬವನ್ನು ಬಳಸಿ ಅವಳನ್ನು ಹಿಡಿದುಕೊಂಡಿವೆ ಅವನ ಬೆರಳುಗಳು. ಈಗ ಈ ಎರಡೂ ದೇಹಗಳು ಅಸ್ತಿತ್ವವನ್ನು ಕಳೆದುಕೊಂಡು ಜೀವದ ಕುಡಿಯ ಸದ್ದು. ಅಲೆಯಾಗಿದೆ ಅದು. ಅದು ಮಾತ್ರ ಕತ್ತಲಲ್ಲಿ. ಕುಡಿ ಜೀವದ ಚಲನೆ. ತಕ್ಷಣಕ್ಕೆ ಬೆಳಕು. 'ಕ್ಯಾ ಸಾಬ್, ಒಬ್ಬರೇ ನಗ್ತಾ ಇದೀರಾ, ಯಾರಾದರೂ ನೆನಪಾದರಾ?' ಉಣ್ಣೆಯ ಕಂಬಳಿಗಳ ರಾಶಿಯಲ್ಲಿ ನಿಂತ ಅದರ ಮಾಲೀಕ ಕೇಳಿದ. ಅವನ ಮಾತುಗಳು ಇವನನ್ನು ಅವಕ್ಕಾಗಿಸಿದವು. 'ಅರೆ ನಿಮಗೆ ಹೇಗೆ ಗೊತ್ತಾಯಿತು?!' ಎಂದು ಕೇಳಿದ. 'ಕಣ್ಣಿನ ಭಾಷೆಗೆ ಮಾತಿನ ಅರ್ಥ ಯಾಕೆ?' ಎಂದು ಅವನ ಮುಂದೆ ನಸುಗೆಂಪು ಬಣ್ಣದ ಕಂಬಳಿಯನ್ನು ಇಟ್ಟ. ಅದನ್ನು ಪ್ಯಾಕ್ ಮಾಡಿಸಿಕೊಂಡು ಹೊರಟ. ಹಿಮದ ಚೂರುಗಳು ಮಳೆಯಂತೆ ಬೀಳುತ್ತಿವೆ. ಅವನಿಗೆ ಮಹಾನ್ ಕಲಾವಿದನ ಚಿತ್ರವೊಂದರಲ್ಲಿ ತಾನೊಂದು ವಸ್ತುವಿನಂತೆ ಭಾಸವಾಯಿತು. ವಾಸ್ತವದ ಆ ಕ್ಷಣದಲ್ಲಿ.

'ಅಪ್ಪ ನನಗೆ ಏನೂ ಬೇಡ, ಜಸ್ಟ್ ಕಮ್ ಬ್ಯಾಕ್ ವಿತ್ ಬ್ಯೂಟಿಫುಲ್ ಮೆಮೋರಿಸ್' ಎಂದು ಅವನು ಮನೆಯನ್ನು ಬಿಡುವಾಗ ಹದಿನೆಂಟು ವರ್ಷದ ಮಗಳು ಆಡಿದ ಮಾತುಗಳು ನೆನಪಾದವು.

ಖರೀದಿಸಿದ ಕಂಬಳಿ ಈಗ ಬ್ಯಾಗಿನೊಳಗಡೆ. ಈಗ ಊರಿನ ಕಡೆ ಪಯಣ. 'ನಿನ್ನ ಗಂಡನ ಜೊತೆಗೂ ಇಷ್ಟೊಂದು ತೀವ್ರವಾಗಿ ರೊಮ್ಯಾನ್ಸ್ ಮಾಡ್ತೀಯಾ?' ಅವಳು ಏನೂ ಮಾತಾಡಲಿಲ್ಲ.

'ಈ ದೇಹ ಕೇವಲ ಮಾಂಸದ ಮುದ್ದೆ ಅಲ್ಲ, ಎಂತಹ ಮ್ಯಾಜಿಕ್ ಇದೆ, ದೇಹಗಳ ಸಮಾಗಮದಲ್ಲಿ ಕೇವಲ ಕಾಮ ಮಾತ್ರ ಸ್ಫುರಿಸುತ್ತೆ ಅಂತ ಹೇಳುವುದಕ್ಕೆ ಆಗುತ್ತಾ, ಭವದ ಗುರುತ್ವವನ್ನು ಮೀರಿ ಸ್ಪೇಸಿನಲ್ಲಿ ಒಂದಾಗುವ ಅವ್ಯಕ್ತವಾದ ಅಲೌಕಿಕ ಕ್ಷಣ ಅದು.'

'ಮಾತನ್ನು ಸೋಲಿಸಿ ಮೌನವ ಗೆಲಿಸು ಈ ಇಂತಹ ಕ್ಷಣದಲ್ಲಿ. ಆಲಿಸು ಉಸಿರಿನ ಗತಿಯನ್ನು' ಅಂದಳು.

'ಗಿಲ್ಟ್ ಆಗೊಲ್ಲ ನಿನಗೆ?'

'ಚುಪ್, ನಿನ್ನ ಸೋಷಿಯಲಾಜಿಯನ್ನು ಡಿಪಾರ್ಟ್ಮೆಂಟಿನಲ್ಲಿ ಬಿಡು' ಎಂದಳು.

ಅವರ ಕೋಣೆಯ ಪಕ್ಕದ ಕೋಣೆಯಲ್ಲಿ ಮಗಳು ತನ್ನ ಗೆಳತಿಯ ಜೊತೆ ಯಾವುದೋ ವಿಷಯವನ್ನು ಕುರಿತು ಗಹನವಾಗಿ ಚರ್ಚಿಸುತ್ತಿರುವುದು ಕೇಳುತ್ತಿತ್ತು.

'ಸೌಂದರ್ಯದ ಮುಂದೆ ನೀತಿ, ಅನೀತಿ ಎನ್ನುವುದಿಲ್ಲ'

ಅವಳ ಬಿಸಿ ಮೊಲೆಗಳು ಅವನನ್ನು ಕರಗಿಸಿದ್ದವು. ಅವನು ಮುಂದಕ್ಕೆ ಒಂದು ಮಾತನ್ನೂ ನುಡಿಯಲಿಲ್ಲ. ಅವನು ಬಾಗಿಲು ತಳ್ಳಿದ. ಜೋರಾಗಿ ಹಿಂದಕ್ಕೆ ಹೋಯಿತು. ಎರಡು ದೇಹಗಳು. ಆ ದೃಶ್ಯ ಅವನನ್ನು ಕ್ಷಣ ಕಂಬದಂತೆ ನಿಲ್ಲಿಸಿತು. ಬ್ಯಾಗಿನಿಂದ ಉಣ್ಣೆಯ ಕಂಬಳಿಯನ್ನು ಆ ಎರಡು ದೇಹಗಳಿಗೆ ಹೊದಿಸಿದ.

'ನಿಜ ಬರುತ್ತಿದ್ದೆ. ಅವಳಿಗೆ ಎಕ್ಸಾಮ್ ಇಲ್ಲ ಅಂದಿದ್ದರೆ ಖಂಡಿತ. ಇರಲಿ ಬಿಡು. ಇನ್ನೊಂದು ಸಲ ಹೋದರೆ ಆಯಿತು. ಅಂದ ಹಾಗೆ ಎಲ್ಲ ಚೆನ್ನಾಗಿತ್ತಾ, ಸುಂದರವಾದ ನೆನಪುಗಳನ್ನು ಹೊತ್ತು ತಂದಿದಿಯಾ?' ಮಗಳ ಮಾತುಗಳನ್ನು ನಾಟಕೀಯವೆಂಬಂತೆ ಜ್ಞಾಪಿಸಿದಳು.

ಅವರಿಬ್ಬರ ಎದುರಿಗೆ ಒಂದು ಕೊಳ. ಕನ್ನಡಿ. ಜಲದೊಳಗೆ ಹೂ ಪಕಳೆಯಂತಹ ಕಲ್ಲುಗಳು. ಕನ್ನಡಿಯಲ್ಲಿ ಕಾಣುವಂತೆ ನಿಜದ ಜಲದಲ್ಲಿ. ಕಾಲ ಹರಿಯುತ್ತಿದೆ. ಅಲ್ಲಿ. ಜಲದಲ್ಲಿ. ಕಲ್ಲು ಸವೆಯುತ್ತಿದೆ ಜಲದೊಳಗೆ ಎಷ್ಟೋ ಕಾಲದಿಂದ. ಪ್ರತಿಕ್ಷಣ. ಶಿಲೆ ಕರಗಿ